ಹಿಡಿತದಲ್ಲಿ ಇಟ್ಟುಕೊಳ್ಳುವುದು ಅಂದರೆ ಏನು? ಬರೆಯುವವರಿಗೆ ಬುದ್ಧಿ ಇಲ್ಲ... ನನ್ನ ಮಾತು ಕೇಳುವ ತಾಳ್ಮೆ, ಸಹನೆ ಅವರಿಗೆ ಇಲ್ಲ...ಮಾತಾಡಿ ಪ್ರಯೋಜನ ಇಲ್ಲ...

'ಈಗೇನು?' ಮೆಲ್ಲನೆ ಕೇಳಿದೆ.

'ಏನು ಅಂದರೆ? ಸಿ.ಎಂ ಕೂಡ ಕೇಳ್ತಾ ಇದ್ದಾರೆ ನಿಮ್ಮ ಮಿಸೆಸ್ ಬರ್ತಾರೆ ತಾನೇ ಕ್ಯಾನ್ವಾಸಿಂಗ್‌ಗೆ ಅಂತ. ಜೊತೆಗೆ ಜನಕ್ಕೂ ನಿನ್ನ ನೋಡೋ ಆಸೆ ಇರುತ್ತೆ... ಪತ್ರಿಕೆಗಳಲ್ಲಿ ಸುದ್ದಿಯಾದರೆ ತುಂಬಾ ಕಷ್ಟ...'

'ಕ್ಯಾನ್ವಾಸಿಂಗ್‌ಗೆ ಬರುತ್ತೇನೆ... ಚುನಾವಣೆ ಆದ ಮಾರನೇ ದಿನ ನಾನು ಹೋಗುತ್ತೇನೆ... ಸರಿನಾ?'

'ನಿನಗಾಗಿ ಅದೆಲ್ಲೊ, ಅದ್ಯಾರೋ ಕಾಯ್ಕೊಂಡು ಕೂತಿದ್ದಾರೆ ಅನ್ನೊ ತರಹ ಮಾತಾಡ್ತಿಯಲ್ಲಾ'

ತಲೆಯಾಡಿಸುತ್ತಾ ಅವರು ಹೇಳಿದಾಗ ಅವರತ್ತ ನೋಡಿ ಮುಗುಳ್ನಕ್ಕೆ. ಹೇಳಲು ಇನ್ನೇನು ಇಲ್ಲದಾಗ ನಗುವೇ ಉತ್ತರ...

ವರ್ಷಕ್ಕೆ ಅಥವಾ ಇನ್ನೂ ಕಡಿಮೆಯೋ ಒಬ್ಬೊಬ್ಬಳು ಗರ್ಲ್ ಫ್ರೆಂಡನ್ನು ಬದಲಿಸುವ ಇವರಿಗೆ, ಬೇರೊಬ್ಬರನ್ನು ಇವರ ಹೆಂಡತಿ ಬಯಸಬಹುದು ಎಂಬ ಕಲ್ಪನೆಯೇ ಇಲ್ಲ... ಇವರಿಗೆ ಶಾಕ್ ಕೊಡಲಾದರೂ ವಿಶ್ವಾಸನ ಜೊತೆ ಹೋಗಿಬಿಡಬೇಕು.

'ಏನು?'

'ಏನಿಲ್ಲ... ಚುನಾವಣೆ ಮುಗಿದ ಮೇಲೆ ಹೋಗುತ್ತೇನೆ. ಆಗ ತಡೆಯಬಾರದು...' ಮೆಲ್ಲನೆ ಹೇಳಿದೆ.

'ನಿನ್ನ ತಲೆಯಲ್ಲಿ ಅದೇನು ತುಂಬಿದ್ದಾನೋ ದೇವರು. ತಿರುಗಿ ಮನೆಗೆ ಸೇರಿಸೊಲ್ಲ... ಮಕ್ಕಳನ್ನು ನೋಡಲು ಬಿಡುವುದಿಲ್ಲ ಎಂದರೂ...... ಹೋಗುತ್ತೇನೆ. ಹೋಗುತ್ತೇನೆ.. ಅಂತ ಒಂದೇ ರಾಗ ಹಾಡ್ತಿಯಲ್ಲ...' ಸಿಡುಕಿದರು.

ನನ್ನದು ಎಂದೇನಾದರೂ ಇದ್ದರೆ ಕಳೆದುಕೊಳ್ಳುವ ಭೀತಿ, ಹಿಡಿದಿಟ್ಟು ಕೊಳ್ಳುವ ಆಸೆ ಇರುತ್ತೆ... ಮನೆಯೂ ನಿಮ್ಮದೇ, ಮಕ್ಕಳೂ ನಿಮ್ಮವೇ... ಮನೆಗೆ ಸೇರಿಸುವ ಸೇರಿಸದಿರುವ ಅಧಿಕಾರ, ಮಕ್ಕಳನ್ನು ನೋಡಲು ಬಿಡುವ ಬಿಡದಿರುವ ಅಧಿಕಾರ ಎಲ್ಲವೂ ನಿಮ್ಮದೇ. ನನ್ನದೇನು ಇಲ್ಲ... ಹಾಗಾಗಿ ಹೋಗುತ್ತೇನೆ. ಎನ್ನುವುದು ಸರಾಗ... ಹೋಗುವುದೂ ಸುಲಭ. ಕಳೆದುಕೊಳ್ಳುವ ಭೀತಿಯೇ ಇಲ್ಲ ಭಿಕಾರಿಗೆ.

ದೀಪವಾರಿಸಿ, ಹೊದ್ದಿಕೆ ಹೊದ್ದು ಮಲಗಿದೆ. ಮಾತ್ರೆ ತೆಗೆದುಕೊಂಡಿರಲಿಲ್ಲ ಆದರೂ ನಿದ್ರೆ, ನಾನು ಕಣ್ಣುಮುಚ್ಚುವುದೇ ಕಾಯುತ್ತಿದ್ದಂತೆ ಆವರಿಸಿಕೊಂಡಿತು.

****

ಮನೆಯಲ್ಲಿಯೇ ಆಗಲಿ, ಮಕ್ಕಳಿಗೇ ಆಗಲೀ ನಾನು ಮನೆ ಬಿಟ್ಟು ಹೋದರೆ ಯಾವ ತೊಂದರೆಯೂ ಆಗುವುದಿಲ್ಲ ಎಂಬುದನ್ನು ಹತ್ತು ದಿನದ ಎಲೆಕ್ಷನ್ ಭರಾಟೆಯ ಓಡಾಟ ನನಗೆ ತಿಳಿಸಿಕೊಟ್ಟಿತ್ತು. ಒಂದು ಬಗೆಯ ನಿರಾಳತೆ. ಮಕ್ಕಳಿಗೆ ನಾನು ಹೋದರೆ, ಇಲ್ಲದೆ ಹೋದರೆ ವ್ಯತ್ಯಾಸವೇನು ಇಲ್ಲದೆ ಇರುತ್ತದೆ ಎಂಬುದು ನಿರಾಳತೆ! ಜೊತೆಗೆ ಬೇಸರ, ಸಂಕಟ...

ತಪ್ಪು ನನ್ನದೇ... ಅತ್ತೆಗೆ ಆಸೆ, ಅಜ್ಜಿಗೆ ಪ್ರೀತಿ ಎಂದು ನನ್ನ ಮಕ್ಕಳನ್ನು ಅವರ ಸುಪರ್ದಿಗೆ ವಹಿಸಿದ್ದು ನಾನೇ. ಮಕ್ಕಳಿಬ್ಬರು ಎಲ್ಲಾದಕ್ಕೂ ಅವರ ಅಜ್ಜಿಯನ್ನು ಆಶ್ರಯಿಸುತ್ತಾರೆ. ಅಜ್ಜಿಗೆ ನಾಲ್ಕು ಮಂದಿ ಇದ್ದಾರೆ ಬೇಕಾದ್ದು ಹೇಳಿ ಮಾಡಿಸಲಿಕ್ಕೆ. ಜೊತೆಗೆ ಮೊಮ್ಮಕ್ಕಳು ಎಂಬ ಪ್ರೀತಿ. ಇವರಿಗಂತೂ ಈ ಎಲೆಕ್ಷನ್ ಆಗಿ ಗೆದ್ರೂ ಅಷ್ಟೇ ಸೋತರೂ ಅಷ್ಟೇ ನನ್ನ ಅವಶ್ಯಕತೆ.. ಇಲ್ಲವೇ ಇಲ್ಲ... ಸುಖ ಸಂಸಾರ ಎಂಬ ಪೋಸಿಗೆ ಹೆಂಡತಿ ಅಷ್ಟೇ.

ನನ್ನ ಯೋಚನಾ ಧಾಟಿಗೆ ನನಗೇ ನಗು ಬಂತು..... ಹೋಗಬೇಕು... ನನ್ನ ಜೀವನ ನಾನು ರೂಪಿಸಿಕೊಳ್ಳಬೇಕು... ನನಗೆ ಬೇಕು ಎಂದು ಹೋಗಬೇಕು... ಆದರೆ ಈ ಕಳ್ಳ ಮನಸ್ಸು ಮಕ್ಕಳಿಗೆ ನಾನೇನು ಬೇಡ.... ಇವರಿಗೂ ಬೇಡ... ಹೋದರೆ ಇವರಿಗ್ಯಾರಿಗೂ ಅನ್ಯಾಯವಾಗುವುದಿಲ್ಲ... ಹಾಗಾಗಿ ಹೋಗುತ್ತೇನೆ ಎಂದುಕೊಳ್ಳುತ್ತಿದ್ದೆ! ಮನಸ್ಸೇ ಹಾಗಲ್ಲವೇ... ಸ್ವಾರ್ಥವನ್ನು ಒಪ್ಪಿಕೊಳ್ಳುವುದು ತುಂಬಾ ಕಷ್ಟ . ಎಲ್ಲರಿಗೂ ಹಾಗೆಯೋ ಅಥವಾ ನನಗೆ ಮಾತ್ರ ಹಾಗೋ ಗೊತ್ತಿಲ್ಲ... ಬೆಳೆದ ವಾತಾವರಣದ ದೋಷವೋ ಗೊತ್ತಿಲ್ಲ... ಎಲ್ಲರೂ ಬದುಕುವುದು ಅವರ ಸ್ವಾರ್ಥವನ್ನು ಗಮನದಲ್ಲಿಟ್ಟುಕೊಂಡೇ... ಈ ಹಿಂಜರಿಕೆ



## ಇಲ್ಲಿಯವರೆಗೆ

ಮನೆಯಲ್ಲಿ ನಡೆದ ಹೋಮಕ್ಕೆ ಮುಖ್ಯಮಂತ್ರಿಗಳು, ಇತರ ಗಣ್ಯರು ಬರುತ್ತಾರೆ. ಇವಳ ತವರು ಮನೆಯವರೂ ಬಂದು ಸಂಭ್ರಮದಿಂದ ಪಾಲ್ಗೊಳ್ಳುತ್ತಾರೆ. ಮರುದಿನ ವಿಶ್ವಾಸ ಸಿಗುತ್ತಾನೆ. ಹೋಮಕ್ಕೆ ಕರೆದಿದ್ದರೆ ಬಂದು ಊಟ ಮಾಡುತ್ತಿದ್ದೆ ಎನ್ನುತ್ತಾನೆ. ಇವಳಿಗೆ ಮನೆ ಬಿಟ್ಟು ಹೋಗಬೇಕು ಎಂಬ ತವಕ. ಜತೆಗೆ ವಿಶ್ವಾಸನಲ್ಲಿ ಅನುರಾಗ ಬೆಳೆಯುತ್ತದೆ. ವಿಶಾಲ ಬಂಗಲೆಯ ಒಡತಿ, ಒಳ್ಳೆಯ ಮನೆಯಲ್ಲಿ ಗೃಹಲಕ್ಷ್ಮಿಯಂತಿರುವ ನಿಮ್ಮ ಮನಸ್ಸಿನಲ್ಲಿ ಏನೋ ಬೇಸರ, ಗೊಂದಲ, ಕಳವಳಗಳಿವೆ ಏಕೆ ಎಂದು ಅವಳನ್ನು ವಿಶ್ವಾಸ ಕೇಳುತ್ತಾನೆ. ವಿಕ್ರಮ್‌ಗೆ ಡೈವೋರ್ಸ್ ಕೊಡುವ ಬಗ್ಗೆ ಚಿಂತನೆ ನಡೆಸಿ ಅದನ್ನು ವಿಶ್ವಾಸ್‌ಗೂ ತಿಳಿಸುತ್ತಾಳೆ. ಇತ್ತ ಚುನಾವಣೆಗೆ ಸ್ಪರ್ಧಿಸಿರುವ ವಿಕ್ರಮ್ ರಾಜಕಾರಣದಲ್ಲಿ ಬ್ಯುಸಿಯಾಗಿರುವ ಕಾರಣ ಎಲೆಕ್ಷನ್ ಮುಗಿದ ಬಳಿಕ ವಿದೇಶಕ್ಕೆ ಹೋಗಿ ಸುತ್ತಾಡಿ ಬರೋಣ ಎಂದು ಅವಳಿಗೆ ತಿಳಿಸುತ್ತಾನೆ.

ಯಾಕೆ?

ವಿಶ್ವಾಸ್.. ವಿಶ್ವಾಸ್ ಸಿಕ್ಕೇ ಇಲ್ಲ... ಫೋನಿನಲ್ಲಿ ಮಾತು ಅಷ್ಟೇ ನನಗೇ ದಿಗಿಲು ಹುಟ್ಟಿಬಿಟ್ಟಿದೆ, ಅವನನ್ನು ಭೇಟಿಯಾಗಲು... ಫೋನಿನ ಮಾತಿನಲ್ಲೇ ಅವನಿಗೂ ಅರಿವಿಲ್ಲದೆ ನನ್ನ ಮೇಲೆ ಮೋಡಿ ಮಾಡಬಲ್ಲ... ಇದೆಲ್ಲಾ ಮುಗಿದು ಮನೆಯಿಂದ ಹೋದ ಮೇಲೆ... ಅವನೊಂದಿಗೆ ನಿಧಾನವಾಗಿ ಮಾತನಾಡಿ... ನಮ್ಮ ಪ್ರೀತಿ ಮದುವೆಯಲ್ಲಿ ಕೊನೆಗೊಳ್ಳುವ ಅವಶ್ಯಕತೆ ಇಲ್ಲ ಎಂದು ಅವನಿಗೆ ಮನದಟ್ಟು ಮಾಡಬೇಕು. ಆಕರ್ಷಣೆ, ಪ್ರೀತಿ ಎಲ್ಲಾ ಇದೆ... ಇರುತ್ತೆ... ಆದರೆ ಬದುಕು ಎಲ್ಲದಕ್ಕಿಂಥ ಮುಖ್ಯ ಎಂದು ಅವನಿಗೆ ಹೇಳಬೇಕು.

ಸಾಧ್ಯವೇ? ಅವನ ಮುಂದೆ ನಿಂತು ಹಾಗೆ ಹೇಳಲು ಸಾಧ್ಯವೇ? ಅಂದು ಶಾಲೆಯಲ್ಲಿ ಅವನು ಇತ್ತ ಮುತ್ತಿಗೆ ಕರಗಿ ಹೋಗಿ ಹತ್ತು ದಿನಗಳು ಉರುಳಿವೆ... ನೆನೆಸಿಕೊಂಡರೆ ಈಗಲೂ ಮೈ ನವಿರೇಳುತ್ತದೆ.... ಮೈ ಬೇರೆ, ಮನಸ್ಸು ಬೇರೆ ವಿವೇಚನೆ ಬೇರೆ ಎರಡು ಮಕ್ಕಳ ತಾಯಿ ನಾನು... ಈ ರೀತಿ ಯೋಚಿಸುವುದು ತಪ್ಪು... ಪರ ಗಂಡಸಿನೊಂದಿಗೆ ಸುಖ ಕಲ್ಪಿಸಿಕೊಂಡು ಪುಳಕಗೊಳ್ಳುತ್ತಿರುವ ನನಗೆ ಯಾವ ನರಕ ಕಾದಿದೆಯೋ.

ಆದರೆ... ಆದರೆ ಅವನೊಂದಿಗೆ ಬದುಕುವಂತಾದರೆ.....

ಇಂದು... ಏನೊ ಪ್ರಚಾರ ಇಲ್ಲ... ನೀನು ನಿನ್ನ ಸ್ತ್ರೀ ಶಕ್ತಿಯಲ್ಲಿ ಒಮ್ಮೆ ಹೇಳಿ ಬಿಡು... ನಾಳೆಯೇ ಮತದಾನ...

ಆ್ಞಂ.. ಬೆಚ್ಚಿ ಅವರತ್ತ ನೋಡಿದೆ...

ಇಂದು ನಿನ್ನ ಸ್ತ್ರೀ ಶಕ್ತಿಯಲ್ಲಿ ಒಮ್ಮೆ ಹೇಳಿ ಬಿಡು.... ಪಬ್ಲಿಕ್ ಪ್ರಚಾರ ನಾಳೆಯೇ ಮತದಾನ ಅಂದೆ...

ಹೂಂ... ಎಚ್ಚರವಾಗಿತ್ತು. ಇಂದು ಪ್ರಚಾರ ಇಲ್ಲ ಎಂದು ಗೊತ್ತಿತ್ತು ಕಳೆದ ಹತ್ತು ದಿನಗಳಿಂದ ಬೆಳಗ್ಗೆ ಏಳು ಗಂಟೆಗೆ ರೆಡಿಯಾಗಿ ಹಳ್ಳಿಯಿಂದ ಹಳ್ಳಿಗೆ, ಒಂದು ಪೆಂಡಾಲಿನಿಂದ ಮತ್ತೊಂದಕ್ಕೆ ಹೋಗುತ್ತಾ ಕಂಡ ಕಂಡವರಿಗೆಲ್ಲಾ ಕೈ